**ಶ್ರೀ ಎಸ್.ಎಸ್. ಪಾಟೀಲ್** : ಯಾವಾಗ ಆರಂಭ ಮಾಡುತ್ತೀರಿ?

**ಶ್ರೀ ಎಸ್.ಆರ್. ಮೋರೆ** : ಈ ಮೂರೂ ಪಾಕೆಟ್‌ಗಳು ಮುಗಿಯಬೇಕಲ್ಲಾ> ಆ ಮೂರು ಪಾಕೆಟ್‌ಗಳ ಕೆಲಸಗಳು ಮುಗಿದ ನಂತರ ಮಾಡುತ್ತೇವೆ.

**ಶ್ರೀ ಎಸ್.ಎಸ್. ಪಾಟೀಲ್** : ಅದು ಯಾವಾಗ ಮುಗಿಯುತ್ತದೆ ಮತ್ತು ಸಣ್ಣ ಪಟ್ಟಣಗಳಲ್ಲಿ ಕೆಲಸ ಯಾವಾಗ ಆರಂಭ ಮಾಡುತ್ತೀರಿ ಎಂಬ ಬಗ್ಗೆ ಹೇಳಿ.

**ಶ್ರೀ ಎಸ್.ಆರ್. ಮೋರೆ** : ಅದನ್ನು ಈಗ ಹೇಳುವುದಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್**: ಈಗ ಹೇಳುವುದಿಲ್ಲ ಎಂದರೆ ಹೇಗೆ? ಐದು ವರ್ಷ ಮುಗಿದ ಮೇಲೆ ಏನ್ಮಾಡೋಣ? ಅದನ್ನೂ ಕೂಡ ತಕ್ಷಣ ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಬಹಳ ತೊಂದರೆ ಇದೆ.

**ಶ್ರೀ ಎಸ್.ಆರ್. ಮೋರೆ** : ಪರಿಶೀಲನೆಯನ್ನು ಮಾಡುತ್ತೇವೆ.

**ವಸತಿ ಮತ್ತು ಘನ ತ್ಯಾಜ್ಯ ವಸ್ತುಗಳ ವಿಲೇವಾರಿ**

20 (628) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ ವಸತಿ, ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಇನ್ನೂ ಮುಂತಾದ ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಜಮೀನನ್ನು ಸರ್ಕಾರ ಖರೀದಿಸುವಾಗ ಎರಡು ರೀತಿಯ ದರಗಳನ್ನು ನಿಗಧಿಗೊಳಿಸುವುದರಿಂದ ಬಡ ರೈತರಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಸದರಿ ಉದ್ದೇಶಗಳಿಗೆ ಖಾಸಗಿಯವರ ಭೂಮಿಯನ್ನು ಸರ್ಕಾರ ಖರೀದಿಸಿ ಸದುಪಯೋಗಪಡಿಸಿಕೊಳ್ಳುವುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

1) ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಸರ್ಕಾರಿ ಜಾಗ ಲಭ್ಯವಿಲ್ಲದ ಕಡೆ ಖಾಸಗಿ ಭೂ ಮಾಲೀಕರಿಂದ ಸರ್ಕಾರದ ಆದೇಶ ಸಂಖ್ಯೆ. ನಅಇ 39 ಸಿಎಸ್‌ಎಸ್ 2002, ದಿ: 2.7.2003 ರ ರೀತ್ಯಾ ಮಾರ್ಗಸೂಚಿ ಬೆಲೆ (Guidance value) ಯಲ್ಲಿ ಕೊಳ್ಳಲು ಮತ್ತು ಸ್ಥಳೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು ಮಾರ್ಗಸೂಚಿ ಬೆಲೆಗಳಿಗಿಂತ ಶೇ. 20 ರಷ್ಟು ಹೆಚ್ಚುವರಿಯನ್ನು ನೀಡಿ ಖರೀದಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ನೀಡಿರುವ ಅಧಿಕಾರದಂತೆ ಖರೀದಿಸಲಾಗುತ್ತಿದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಖರೀದಿಯನ್ನು ಜಮೀನಿನ ಮಾಲೀಕರೊಂದಿಗೆ ಒಡಂಬಡಿಕೆಯ ಸಹಮತಿಯ ರೀತ್ಯಾ ಕ್ರಮ ವಹಿಸುತ್ತಿರುವುದರಿಂದ ಬಡ ರೈತರಿಗೆ ತೊಂದರೆಯಾಗುವುದಿಲ್ಲ.

2. ಇಲ್ಲ.

3. ಉದ್ಭವಿಸುವುದಿಲ್ಲ.

**ಶ್ರೀ ಎಸ್. ಅಂಗಾರ :** ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮಾನ್ಯ ಸಚಿವರು ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಸರ್ಕಾರಿ ಜಾಗ ಲಭ್ಯವಿಲ್ಲದ ಕಡೆ ಖಾಸಗಿ ಭೂ ಮಾಲೀಕರಿಂದ ಸರ್ಕಾರದ ಆದೇಶದ ಪ್ರಕಾರ, ಮಾರ್ಗಸೂಚಿಯ ಪ್ರಕಾರ ಭೂಮಿಯನ್ನು ಖರೀದಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದಲ್ಲಿ ಎರಡು ರೀತಿಯ ಆದೇಶವನ್ನು ಮಾಡಿದ್ದಾರೆ. 1996ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ವಸತಿ ನಿವೇಶನ ರಚಿಸುವುದಕ್ಕಾಗಿ ಖಾಸಗಿ ಭೂಮಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಒಂದು ಎಕರೆಗೆ 50 ಸಾವಿರ ರೂಪಾಯಿಗಳು ಎಂದು ಬೆಲೆಯನ್ನು ನಿಗದಿ ಮಾಡಿದ್ದಾರೆ. ಆದರೆ ನಗರಾಭಿವೃದ್ಧಿ ಇಲಾಖೆಯಿಂದ ಈ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವುದಕ್ಕೆ ಖಾಸಗಿ ಭೂಮಿಯನ್ನು ಖರೀದಿ ಮಾಡುವುದಕ್ಕೆ ಒಂದು ಎಕರೆಗೆ 20 ಸಾವಿರ ರೂ. ಎಂದು ಬೆಲೆಯನ್ನು ನಿಗದಿ ಮಾಡಿದ್ದಾರೆ. ಈ ಬೆಲೆಗೆ ಯಾವುದೇ ಗ್ರಾಮದಲ್ಲಿ ಯಾವುದೇ ರೈತರು ಭೂಮಿಯನ್ನು ಬಿಟ್ಟುಕೊಡುವುದಕ್ಕೆ ಒಪ್ಪುವುದಿಲ್ಲ. ಸಂಬಂಧಪಟ್ಟ ಇಲಾಖೆಯವರು ಈ ಭೂಮಿ ಖರಿ..ಗೆ ಸಂಬಂಧಪಟ್ಟಂತೆ ಕಡತವನ್ನು ತಯಾರು ಮಾಡಿದರೆ ಅದಕ್ಕೆ ಸಂಬಂಧಪಟ್ಟ ಭೂ ಮಾಲೀಕರು ಕೋರ್ಟಿಗೆ ಹೋಗುತ್ತಾರೆ. ಅದಕ್ಕಾಗಿ ಈ ಎರಡೂ ರೀತಿಯ ಆದೇಶಗಳು ಇರುವ ಸಮಯದಲ್ಲಿ ಯಾವ ರೀತಿಯ ಆದೇಶದ ಪ್ರಕಾರ ಅಧಿಕಾರಿಗಳು ಭೂಮಿಯನ್ನು ಖರೀದಿ ಮಾಡುತ್ತಾರೆ? ಆದಷ್ಟು ಬೇಗ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ನಮಗೆ ಭೂಮಿಯನ್ನು ಒದಗಿಸಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಮೋಹ :** ಮಾನ್ಯ ಅಧ್ಯಕ್ಷರೆ, ಈಗ ನಾವು ತ್ಯಾಜ್ಯ ವಸ್ತುಗಳನ್ನು ಹೊರಗೆ ಹಾಕುವುದಕ್ಕೆ ಭೂಮಿಯನ್ನು ಖರೀದಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳಿಗೆ ಸರ್ಕಾರದಿಂದ ಗೈಡೆನ್ಸ್ ವ್ಯಾಲ್ಯೂ ಕಳುಹಿಸಿಕೊಟ್ಟಿದ್ದೇವೆ. ಈ ಗೈಡೆನ್ಸ್ ವ್ಯಾಲ್ಯೂ ಮತ್ತು ಅದಕ್ಕೆ 20 ಪರ್ಸೆಂಟ್ ಹೆಚ್ಚು ಎಂದು ಹೇಳಿದ್ದೇವೆ. ಆದರೆ ಮಾನ್ಯ ಸದಸ್ಯರು ಈ ಗೈಡೆನ್ಸ್ ವ್ಯಾಲ್ಯೂ ಕಡಿಮೆಯಾಗಿದೆಯಾದ ಕಾರಣ ಆಶ್ರಯ ಯೋಜನೆಯಲ್ಲಿ ಭೂಮಿ ಖರೀದಿ ಮಾಡಲು ನಿಗದಿ ಮಾಡಿರುವ ಬೆಲೆಯನ್ನು ನಿಗದಿ ಮಾಡಿ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಬಹಳ ವ್ಯತ್ಯಾಸವಿದೆ. ಆಶ್ರಯ ಸ್ಕೀಂ ಮನೆಗಳು ಪಟ್ಟಣಕ್ಕೆ ಹತ್ತಿರವಾಗಿದ್ದರಿಂದ ಮತ್ತು ಅಲ್ಲಿ ವಾಸ ಮಾಡತಕ್ಕಂಥ ಜನರಿಗೆ ಸಿವಿಕ್ ಫೆಸಿಲಿಸ್‌ಗಳನ್ನೂ ಕೂಡ ಮಾಡಲಾಗಿರುತ್ತದೆ. ಆದುದರಿಂದ ಅಲ್ಲಿ ಆಶ್ರಯ ಜನರಿಗೆ ಸಿವಿಕ್ ಫೆಸಿಲಿಟಿಸ್‌ಗಳನ್ನೂ ಕೂಡ ಮಾಡಲಾಗಿರುತ್ತದೆ. ಆದುದರಿಂದ ಅಲ್ಲಿ ಆಶ್ರಯ ಯೋಜನೆಗೆ ಭೂಮಿಯನ್ನು ನಾವು ಪಟ್ಟಣದಲ್ಲಿರತಕ್ಕಂಥ ಭೂಮಿಯನ್ನೇ ಕೊಳ್ಳಬೇಕಾಗಿರುತ್ತದೆಯಾದ ಕಾರಣ ಅಲ್ಲಿ ನಾವು ಭೂಮಿ ಖರೀದಿಗೆ ಹೆಚ್ಚು ಹಣವನ್ನು ಕೊಡುತ್ತೇವೆ. ಆದರೆ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಪಟ್ಟಣದಿಂದ 15-20 ಕಿ.ಮೀ ದೂರದಲ್ಲಿ ಭೂಮಿ ತೆಗೆದುಕೊಳ್ಳುವುದರಿಂದ ಅಲ್ಲಿ ಭೂಮಿಗೆ ಆಶ್ರಯ ಯೋಜನೆಯಲ್ಲಿ ಭೂಮಿಗೆ ನಿಗದಿ ಮಾಡಿರುವ ಬೆಲೆಯನ್ನು ಕೊಡುವುದಕ್ಕಾಗುವುದಿಲ್ಲ. ಆ ಪ್ರದೇಶದಲ್ಲಿ ಸರ್ಕಾರ ಗೈಡೆನ್ಸ್ ವ್ಯಾಲ್ಯೂ ಏನು ನಿಗದಿ ಮಾಡಿದೆ ಆ ಪ್ರಕಾರ ಬೆಲೆ ಕೊಡುತ್ತೇವೆ. ಒಂದು ವೇಳೆ ರೈತರು ಆ ಬೆಲೆಗೆ ಕೊಡುವುದಕ್ಕೆ ಸಹಕಾರ ಕೊಡದಿದ್ದರೆ ಸರ್ಕಾರ ಅಕ್ವಿಸಿಶನ್ ಮಾಡುತ್ತದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಈಗ ಇಲ್ಲಿ ಮುಖ್ಯಮಂತ್ರಿಗಳೂ ಇದ್ದಾರೆ. ನಾನು ತಮಗೊಂದು ಪತ್ರವನ್ನು ಬರೆದಿದ್ದೆ. ಅದಕ್ಕೆ ತಮ್ಮ ಸೆಕ್ರೆಟರಿಯವರು ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ತಕ್ಷಣ ಇದನ್ನು ಸರಿಪಡಿಸಿ ಎಂದು ಹೇಳಿದ್ದಾರೆ. ಇಲ್ಲಿ ಮೂಲ ಪ್ರಶ್ನೆ ಏನು? ಆಶ್ರಯ ಯೋಜನೆ ಇರಬಹುದು ಅಥವಾ ಬೇರೆ ಯಾವುದೇ ಯೋಜನೆ ಇರಬಹುದು, ಇವೊತ್ತು ಬೆಲೆ ಏನು ನಿಗದಿ ಮಾಡಿದ್ದೀರಿ ಮುಖ್ಯಮಂತ್ರಿಗಳೇ, ಆ ರೇಟ್‌ಗೆ ಒಂದು ಎಕರೆ ಜಮೀನೂ ಕೂಡ ಸಿಗುವುದಿಲ್ಲ. ಎಂಟು ವರ್ಷಗಳ ಹಿಂದೆ ಈ ಬೆಲೆಯನ್ನು ನಿಗದಿ ಮಾಡಿರುವುದು. ಇವೊತ್ತು ರಾಜ್ಯದ ಯಾವುದೇ ಪ್ರದೇಶದಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಬೆಲೆಗೆ ಒಂದು ಎಕರೆ ಭೂಮಿ ಸಿಗುವುದಿಲ್ಲ. ಹಿಂದೆ ಈ ಬೆಲೆ ನಿಗದಿ ಮಾಡಿರುವುದರಿಂದ ನಮ್ಮ ರಾಜ್ಯದಲ್ಲಿ ಒಂದು ಸೈಟ್ ಕೊಡುವುದಕ್ಕೂ ಆಗಿಲ್ಲ. ಕೇವಲ ಕಸಕಡ್ಡಿಯನ್ನು ಹೊರಗೆ ಹಾಕುವಂಥದ್ದಕ್ಕಲ್ಲ, ಕಸ ಎಲ್ಲಿಗೆ ಹಾಕುತ್ತಾರೆ ಸ್ವಾಮಿ, ಯಾವುದಾದರೂ ಒಂದು ನಗರ ಅಥವಾ ಯಾವುದೋ ಒಂದು ಹಳ್ಳಿ ಅಥವಾ ಒಂದು ತಾಲ್ಲೂಕು ಕೇಂದ್ರ ಎಂದಿಟ್ಟುಕೊಳ್ಳಿ, ಒಂದು ಕಿ.ಮೀ, ಎರಡು ಕಿ.ಮೀ. ದೂರದಲ್ಲಿ ಮಾತ್ರ ನಿಮ್ಮ ನಗರಸಭೆಯವರು ಕಸ ಹಾಕಿಬರಬೇಕು. ಇವೊತ್ತು ರಾಜ್ಯದಲ್ಲಿ ಎಲ್ಲಿಯೇ ಆದರೂ ಕೂಡ ಒಂದು ಎಕರೆ 20 ಸಾವಿರ ರೂಪಾಯಿಗೆ ಸಿಗುತ್ತದೆಯೆ ಸ್ವಾಮಿ? ಇಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ಒಂದು ಮಿನಿಮಮ್ ಬೆಲೆಯನ್ನು ಈಗ ನಿಗದಿ ಮಾಡಬೇಕು. ಏಕೆಂದರೆ ಎಂಟು ವರ್ಷಗಳ ಹಿಂದೆ ಬೆಲೆ ನಿಗದಿ ಮಾಡಿರುವ ಆಜ್ಞೆ ಈಗ ಇರುವುದು. ಈಗ 20 ಸಾವಿರ ರೂಪಾಯಿಗಳಿಗೆ ಒಂದು ಗುಂಟೆ ಭೂಮಿಯೂ ಸಿಗುವುದಿಲ್ಲವಾದ್ದರಿಂದ ಸೈಟನ್ನು ಕೊಡುವುದಕ್ಕೆ ಆಗುವುದಿಲ್ಲ. ಬೇರೆ ಯಾವುದೇ ಸರ್ಕಾರಿ ಕೆಲಸಕ್ಕೂ ಉಪಯೋಗ ಆಗುವುದಿಲ್ಲ. ನಾನು ಬರೆದ ಪತ್ರಕ್ಕೆ ಮುಖ್ಯಮಂತ್ರಿಗಳ ಕಛೇರಿಯಿಂದ ಪತ್ರ ಹೋದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಮುಂದೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇವೊತ್ತು ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ ಮಿನಿಮಮ್ ಇವೊತ್ತು ಒಂದು ಎಕರೆಗೆ 50 ಸಾವಿರ ರೂಪಾಯಿಗಳನ್ನಾದರೂ ಗ್ರಾಮೀಣ ಪ್ರದೇಶದಲ್ಲಿ ಬೆಲೆ ನಿಗದಿ ಮಾಡಿ 20 ಪರ್ಸೆಂಟ್ ಹೆಚ್ಚು ಅಲ್ಲ, ಅದಕ್ಕಿಂತಲೂ ಹೆಚ್ಚು ಹಣ ಕೊಟ್ಟು ಭೂಮಿಯನ್ನು ಖರೀದಿ ಮಾಡುವುದಕ್ಕೆ ಅಧಿಕಾರಿಗಳಿಗೆ ನೀವು ಅಧಿಕಾರ ಕೊಡದಿದ್ದರೆ ಇನ್ನು ಹತ್ತು ವರ್ಷವಾದರೂ ಕೂಡ ಆಶ್ರಯ ಯೋಜನೆಯಲ್ಲಿ ನೀವು ಒಂದು ಸೈಟ್‌ನ್ನೂ ಕೊಡುವುದಕ್ಕೆ ಆಗುವುದಿಲ್ಲ. ಇದರ ಜೊತೆಗೆ ಬೇರೆ ವ್ಯವಸ್ಥೆಗಳಿಗೂ ಭೂಮಿ ತಮಗೆ ಸಿಗುವುದಿಲ್ಲ. ಆದುದರಿಂದ ತಾವು ದಯಮಾಡಿ ಈ ಬಗ್ಗೆ ಪರಿಶೀಲನೆ ಮಾಡಿ ಒಂದು ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಟ್ಟರೆ ಹೆಚ್ಚು ಅನುಕೂಲ ಎಂದು ನನಗನ್ನಿಸುತ್ತದೆ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎಂಟು ವರ್ಷ, ಹತ್ತು ವರ್ಷಗಳ ಹಿಂದೆ ಬೆಲೆಯನ್ನು ಜಮೀನಿಗೆ ನಿಗದಿ ಮಾಡಿರುವುದು ಏನಿದೆ ಅದರ ಬೆಲೆ ಇಂದು ಹೆಚ್ಚಾಗುತ್ತದೆ. ಮಾರ್ಕೆಟ್ ಬೆಲೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಪ್ರೆಸೆಂಟ್ ಮಾರ್ಕೆಟ್ ವ್ಯಾಲ್ಯೂ ಹೆಚ್ಚಾಗುತ್ತಲೇ ಇರುವುದರಿಂದ ಸರ್ಕಾರ ಕೂಡ ಯಾರಿಗೂ ನಿವೇಶನ ಕೊಡುವುದಕ್ಕೆ ಆಗುತ್ತಿಲ್ಲ. ಸೈಟ್‌ನ್ನು ಹಂಚುವುದಕ್ಕೇ ನಮಗೆ

ಸಾಧ್ಯವಾಗುತ್ತಿಲ್ಲ. ಆದುದರಿಂದ ವಿರೋಧ ಪಕ್ಷದ ನಾಯಕರ ಸಲಹೆ ಏನಿದೆ ಆ ಸಲಹೆಯನ್ನು ಸರ್ಕಾರ ಪರಿಶೀಲಿಸಿ ಒಂದು ಆದೇಶವನ್ನು ಹೊರಡಿಸುತ್ತೇವೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿ ಏನು ಮಾರ್ಕೆಟ್ ವ್ಯಾಲ್ಯೂ ಇದೆ ಆ ಪ್ರಕಾರ....

**ಶ್ರೀ ಬಿ.ಎಸ್. ಯಡಿಯೂರಪ್ಪ** : ತಾವು ಸ್ವಲ್ಪ ಈಲ್ಡ್ ಆಗಬೇಕೆಂದು ವಿನಂತಿ. ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಏನು ಆಗುತ್ತಿದೆ ಎನ್ನುವುದನ್ನು ಬಹಿರಂಗವಾಗಿಯೇ ತಮಗೆ ಹೇಳುತ್ತೇನೆ. 50-60 ಸಾವಿರ ರೂಪಾಯಿಗೆ ಖರೀದಿ ಮಾಡಿದ್ದರೂ ಅಲ್ಲಿ ಹಳೆಯ ದರ 25 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಇರುತ್ತದೆ. ಆದುದರಿಂದ ಆ ವ್ಯಾಲ್ಯೂ ಮೇಲೆ ಈಗ ಖರೀದಿ ಮಾಡುವುದಕ್ಕೇ ಆಗುವುದೇ ಇಲ್ಲ. ಇದು ತಮಗೂ ಗೊತ್ತಿದೆ. ಅದಕ್ಕೋಸ್ಕರ....

**ಶ್ರೀ ಧರ್ಮಸಿಂಗ್** : ಒಟ್ಟಿನಲ್ಲಿ ಯಾರಿಗೂ ತೊಂದರೆ ಆಗದ ರೀತಿಯಲ್ಲಿ ಈ ಬಗ್ಗೆ ಸರ್ಕಾರ ಗಮನಹರಿಸಿ ಬೆಲೆ ನಿಗದಿ ಮಾಡುವಂಥ ಕೆಲಸ ಮಾಡುತ್ತದೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

**ಶ್ರೀ ಎಸ್. ಯೋಗೀಶ್‌ಭಟ್** : ಮಾನ್ಯ ಅಧ್ಯಕ್ಷರೆ, ಘನ ತ್ಯಾಜ್ಯ ವಸ್ತುಗಳು, ಅದರಲ್ಲೂ ಆಸ್ಪತ್ರೆಗಳ hazardous ಮತ್ತು ಇನ್‌ಫೆಕ್ಟೆಡ್ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಒಂದು ವರ್ಷದ ಹಿಂದೆಯೇ ಈ ಬಗ್ಗೆ ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ಆದರೆ ಈಗಲೂ ಅದು ಇಂಪ್ಲಿಮೆಂಟ್ ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಶೀಘ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಎಸ್.ಆರ್. ಮೋರೆ** : ಮಾನ್ಯ ಅಧ್ಯಕ್ಷರೆ, ಸುಪ್ರೀಂಕೋರ್ಟ್ ಡಿಸಿಶನ್ ಆದಮೇಲೆ ಅದು ಮ್ಯಾನ್‌ಡೇಟರಿ ಆಗುತ್ತದೆ. ಎಲ್ಲಾ ನಗರಸಭೆಗಳಿಗೂ ನಾವು ಇದನ್ನು ಅನುಸರಿಸಿ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ ಕೆಲವೊಂದು ಕಡೆಗಳಲ್ಲಿ ಭೂಮಿಯನ್ನು ತೆಗೆದುಕೊಳ್ಳುವುದರಲ್ಲಿ ತೊಂದರೆ ಆಗಿದೆಯಾದ್ದರಿಂದ ಇದನ್ನು ಇಂಪ್ಲಿಮೆಂಟ್ ಮಾಡಲು ತಡವಾಗಿದೆಯೇ ವಿನಃ ಬಾಕಿ ಪಟ್ಟಣಗಳಲ್ಲಿ ಕೆಲಸವನ್ನು ನಾವು ಆರಂಭ ಮಾಡಿದ್ದೇವೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಹೊರಗೆ ಹಾಕುವ ಕಾರ್ಯಕ್ರಮ ಸಂಪೂರ್ಣವಾಗಿ ಮುಗಿಯುತ್ತದೆ.

**ಶ್ರೀ ಎಸ್. ಅಂಗಾರ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನಗೆ ಏಕೆ ತಪ್ಪು ಮಾಹಿತಿ ಕೊಟ್ಟಿದ್ದಾರೋ ಗೊತ್ತಾಗಲಿಲ್ಲ. ನನ್ನ ಸೂಳ್ಯ ತಾಲ್ಲೂಕಿನಲ್ಲಿ ನಗರ ಬಜೆಟ್ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭವಾಗಿದೆ. ಶುದ್ಧೀಕರಣ ಘಟಕ ಮಾಡಬೇಕೆಂದರೆ ಸ್ಥಳ ಇಲ್ಲವಾಗಿದೆ. ಇದರ ಜೊತೆಗೆ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವುದಕ್ಕೂ ಸ್ಥಳ ಇಲ್ಲದಂತಾಗಿದೆ. ಆದರೆ ಅವರು ಈ ಕಾಮಗಾರಿಗಳನ್ನು ಮಾಡಿ ಎಂದು ಹೇಳುತ್ತಾರೆ. ಅದಕ್ಕೇ ನಾನು ಹೇಳಿದ್ದು ಈ ಭೂಮಿ ಖರೀದಿ ಸಂಬಂಧ ಸರ್ಕಾರದ ಎರಡು ರೀತಿಯ ಆದೇಶಗಳು ಇವೆ. 1996 ರಲ್ಲಿ ಕಂದಾಯ ಗ್ರಾಮಗಳು, ಹೋಬಳಿ ಕೇಂದ್ರದ ಸ್ಥಾನಗಳು, ಸಿ.ಎಂ.ಸಿ. ಪಟ್ಟಣ ಅಥವಾ 50 ಸಾವಿರ ಜನಸಂಖ್ಯೆ ಉಳ್ಳ ನಗರಸಭೆ, ಒಂದು ಲಕ್ಷ ಜನಸಂಖ್ಯೆ ಇರುವನಗರಸಭೆ, ಈ ಎಲ್ಲ ಪ್ರದೇಶಗಳಿಗೆ ನಿರ್ದಿಷ್ಟವಾಗಿರತಕ್ಕಂಥ ಭೂಮಿಗೆ ಒಂದು ಎಕರೆಗೆ ಇಷ್ಟು ಬೆಲೆಯನ್ನು ಕೊಡಬಹುದು ಎಂದು ಸರ್ಕಾರ ಆದೇಶ ಮಾಡಿದೆ. ಇದನ್ನು 1996ರಲ್ಲಿ ಮಾಡಿದೆ. ಇನ್ನು 2003ರಲ್ಲಿ ಏನು ಸಬ್-ರಿಜಿಸ್ಟ್ರಾರ್ ವ್ಯಾಲ್ಯುಯೇಶನ್ ಇದೆ ಆ ಪ್ರಕಾರ

ವ್ಯಾಲ್ಯುಯೇಶನ್ ಮಾಡಿ 20 ಪರ್ಸೆಂಟ್ ಜಾಸ್ತಿ ಮಾಡಿದರೆ ಒಂದು ಎಕರೆಗೆ 20 ಸಾವಿರ ಇದ್ದರೆ 20 ಪರ್ಸೆಂಟ್ ಜಾಸ್ತಿ ಮಾಡಿದರೂ ಕೂಡ ಕೇವಲ 24 ಸಾವಿರ ರೂಪಾಯಿಗಳು ಮಾತ್ರ ಆಗುವುದು. ಹಾಗಾದರೆ ಹಿಂದೆ 1996ರಲ್ಲಿ ಯಾವ ಆಧಾರದ ಮೇಲೆ ಭೂಮಿಯ ವ್ಯಾಲ್ಯೂ ನಿಗದಿ ಮಾಡಿದಿರಿ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ. ಇನ್ನು ಸುಪ್ರೀಂಕೋರ್ಟ್ ಆದೇಶವಿದ್ದರೂ ಕೂಡ ಆ ಪ್ರಕಾರ ನಮ್ಮ ಕ್ಷೇತ್ರದಲ್ಲಿ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಅಗತ್ಯವಾದ ಕಾರ್ಯ ಜಾರಿಗೆ ಬರಲೇ ಇಲ್ಲ. ಇದಕ್ಕೂ ಸ್ಪಷ್ಟ ಉತ್ತರವನ್ನು ಕೊಡಬೇಕು.

**ಶ್ರೀ ಎಸ್.ಆರ್. ಮೋರೆ :** ಭೂಮಿಯನ್ನು ತೆಗೆದುಕೊಳ್ಳುವ ಪ್ರಕ್ರಿಯೆ ನಡೆಯುತ್ತಾ ಇದೆ. ಈಗಾಗಲೇ ರೈತರು ನಮಗೆ ಭೂಮಿಯನ್ನು ಕೊಟ್ಟುಬಿಟ್ಟಿದ್ದರೆ ಇಷ್ಟೊತ್ತಿಗೆ ಆ ಕೆಲಸ ಮುಗಿದುಹೋಗುತ್ತಿತ್ತು.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಮಾನ್ಯ ಸಚಿವರೆ, ಒಂದು ಎಕರೆಗೆ 50 ರಿಂದ 60 ಸಾವಿರ ರೂಪಾಯಿಗಳ ಬೆಲೆ ನಿಗದಿ ಮಾಡಿದರೆ ಭೂಮಿಯನ್ನು ಕೊಡುವುದಕ್ಕೆ ರೈತರು ರೆಡಿ ಇದ್ದಾರೆ. ಅದನ್ನು ಬಿಟ್ಟು ನೀವು 20 ಸಾವಿರ ರೂಪಾಯಿಗಳಿಗೆ ರೈತರಿಂದ ತೆಗೆದುಕೊಂಡರೆ ರೈತ ಹಾಳಾಗಿಹೋಗುತ್ತಾನೆ. ರೈತ ಹೇಗೆ ಬದುಕಲು ಸಾಧ್ಯವಾಗುತ್ತದೆ ಹೇಳಿ. ರೈತ 50 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಮೀನನ್ನು ಬಿಟ್ಟುಕೊಡಲು ರೆಡಿ ಇರುವುದರಿಂದ ಆ ಬೆಲೆಗೆ ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಜಮೀನು ಕೂಡ ಇರುವುದರಿಂದ ಈ ಬಗ್ಗೆ ಪರಿಶೀಲನೆಯನ್ನು ಮಾಡಿ ಭೂಮಿಯನ್ನು ಖರೀದಿ ಮಾಡಲು ವ್ಯವಸ್ಥೆಯನ್ನು ಮಾಡಿ.

**ಶ್ರೀ ಎಸ್.ಆರ್. ಮೋರೆ :** ಪರಿಶೀಲನೆ ಮಾಡುತ್ತೇವೆ.

**ಅಧ್ಯಕ್ಷರು :** ಮಾನ್ಯ ಸದಸ್ಯರಾದ ಬಸವರಾಜ ಭೀಮಪ್ಪ ಹಿತ್ನಾಳ್.ಕೆ. ಇವರು ಕೇಳಿರುವ ಪ್ರಶ್ನೆಗೆ ಉತ್ತರ ಇನ್ನೂ ಬಂದಿರುವುದಿಲ್ಲವಾದ ಕಾರಣ ಮುಂದಿನ ಪ್ರಶ್ನೆಗೆ ಹೋಗೋಣ.

**ಬೆಂಗಳೂರಿನ ರಾಜಾಜಿನಗರದ ಬಳಿ ನಿರ್ಮಿಸುತ್ತಿರುವ ಗ್ರೇಡ್ ಸಪರೇಟರ್ ಕಾಮಗಾರಿಯ ಪ್ರಗತಿ**

22 (255) : ಶ್ರೀ ವಿ. ಸೋಮಣ್ಣ. ಎಂ.ಎಲ್.ಎ (ಬಿನ್ನಿಪೇಟೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ರಾಜಾಜಿನಗರದ ಬಳಿ ಗ್ರೇಡ್ ಸಪರೇಟರ್ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ:

ಆ) ಇದರ ಅಂದಾಜು ವೆಚ್ಚವೆಷ್ಟು ಹಾಗೂ ಇದನ್ನು ಯಾವ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿತ್ತು;

ಇ) ಈ ಕಾಮಗಾರಿಯನ್ನು ಯಾರಿಗೆ ಗುತ್ತಿಗೆಗೆ ನೀಡಲಾಗಿದೆ;

ಈ) ಈ ಕಾಮಗಾರಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಉ) ಈ ಕಾಮಗಾರಿ ಕೆಲಸ ಮಂದಗತಿಯಲ್ಲಿ ಸಾಗುತ್ತಿರಲು ಕಾರಣಗಳೇನು;

ಊ) ಈ ಕಾಮಗಾರಿ ವಿಳಂಬದಿಂದ ವಾಹನ ಸಂಚಾರ ವ್ಯತ್ಯಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;